

1957ರಲ್ಲಿ ಅಂದರೆ, ಸರಿಯಾಗಿ 60 ವರ್ಷಗಳ ಹಿಂದೆ, ಚಂದ್ರಶೇಖರ ಪಾಟೀಲರ ಕರ್ಮಭೂಮಿಯಾದ ಧಾರವಾಡದಲ್ಲಿ ನಡೆದ 39ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕುವೆಂಪು ಅವರು ಅಧ್ಯಕ್ಷತೆ ವಹಿಸಿದ್ದರು. ಕುವೆಂಪು ಅವರ ಕರ್ಮಭೂಮಿಯಾಗಿದ್ದ ಮೈಸೂರಿನಲ್ಲಿ ಈಗ ನಡೆಯುತ್ತಿರುವ 83ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಧಾರವಾಡದ ಚಂದ್ರಶೇಖರ ಪಾಟೀಲರು ಅಧ್ಯಕ್ಷರಾಗಿದ್ದಾರೆ. ಕುವೆಂಪು ಅವರ ವಿಚಾರಧಾರೆಗಳನ್ನು ಅಪ್ಪಿಕೊಂಡಿರುವ ಚಂಪಾ ಅವರು ವಿನೀತರಾಗಿ ಹೇಳುತ್ತಾರೆ– 'ಪರಂಪರೆಯ ಒಂದು ಕೊಂಡಿ ಹೀಗೆ ಕೆಲಸ ಮಾಡಿದೆ ನೋಡ್ರೀ. ನನಗೆ ಇದಕ್ಕಿಂತ ದೊಡ್ಡ ಭಾಗ್ಯ ಇನ್ನೇನಿದೆ?'

# ಸಾಹಿತಿ ಆ್ಯಕ್ಟಿವಿಸ್ಟ್ ಆಗಬೇಕು..

**ಬಿ.ಎಂ. ಹನೀಫ್**
ಚಿತ್ರಗಳು: ಆನಂದ ಬಕ್ಷಿ

ನವೆಂಬರ್ 24ರಿಂದ ಮೈಸೂರಿನಲ್ಲಿ ನಡೆಯಲಿರುವ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಇಂಗ್ಲಿಷ್ ಪ್ರೊಫೆಸರ್, ಕನ್ನಡ ಸಾಹಿತಿ, 'ಚಂಪಾ' ಎಂದೇ ಜನಪ್ರಿಯರಾಗಿರುವ ಚಂದ್ರಶೇಖರ ಪಾಟೀಲರ ಜತೆಗಿನ ಸಂದರ್ಶನದ ಆಯ್ದ ಭಾಗ ಇಲ್ಲಿದೆ:



ವಿನ್ಯಾಸ: ದಿಲ್